ನನಗೆಲ್ಲ ಆಗಿತ್ತು. ಕೆಲಸ ಬಿಟ್ಟು ಮದಿವಿ ಆಗೂದು ಹುಚ್ಚತನಾ ಅನ್ನಿತ್ತು. ಒಮ್ಮೆ ಕೈಗೆ ಸಂಬಳ ಬಂದಾಗ ಆಗುವ ಖುಷಿನೇ ಬ್ಯಾರೆ. ನನ್ನ ಖರ್ಚು ನಾನೇ ನೋಡಿಕೊಳ್ಳುಹಂಗ ಆದಾಗ... ಮನೀ ಖರ್ಚಿಗೆ ನಾ ರೊಕ್ಕ ಕೊಡೂಹಂಗ ಆದಾಗ ಇದನ್ನೆಲ್ಲ ಬಿಟ್ಟು ಮದಿವಿ ಆಗಬೇಕ? ಮದಿವಿ ಆಗಿ, ಕೆಲಸ ಬಿಟ್ಟು, ಮನೀ ಖರ್ಚಿಗೆ ಕೈ ಒಡ್ಡಬೇಕ? ಇಂಥವೇ ಪ್ರಶ್ನೆ ನನ್ನ ಮುಂದ ಇದ್ವು. ಅಮ್ಮ ಜೊತಿಗಿದ್ರು. ನನ್ನ ನಿರಾಕರಣಕ್ಕ ಒಂದೊಂದೇ ಬಿಡಿಸಿ ಹೇಳ್ತಿದ್ರು. ಕೆಲಸ ಬಿಡೂ ಅಗತ್ಯ ಇಲ್ಲ. ಬಿಡಬಾರದು. ಮದಿವಿ ಆದಮ್ಯಾಲೆ ನಾವು ಏನು ಅನ್ನೂ ಪ್ರಶ್ನೆ ನಮ್ಮುಂದ ನಿಂದರ್ತದ. ಅದಕ್ಕ ಉತ್ತರ ಹುಡುಕೂದ್ರೊಳಗ ಅರ್ಧ ಆಯುಷ್ಯ ಕಳದಿರ್ತದ.

'ಕೆಲಸ ಮನಿ ಎರಡೂ ತಂತಿ ಮ್ಯಾಲಿನ ನಡಿಗಿ ಇದ್ದಂಗ...' ಅಂತ ಎಲ್ಲ ಬಿಡಿಸಿ ಹೇಳ್ತಿದ್ಲು. ನನಗ ಮನಸಿನಾಗ ಚೀರಿ ಹೇಳಬೇಕು ಅಂತ ಅನಸ್ತಿತ್ತು. 'ನಾನು ತಂತಿ ಮ್ಯಾಲಿನ ನಡಿಗಿ ಮಾಡೂದಿಲ್ಲ ಅಂತ. ನಂಗ ಒಂದೋ ಕೆಲಸಾ ಮಾಡಬೇಕು. ಇಲ್ಲಾ ಸಂಸಾರ ಮಾಡಬೇಕು...' ಆದ್ರ ಹಂಗ ಹೇಳೂದು ಆಗ್ಲಿಲ್ಲ. ಒಂದು ಸಲೇನೂ ಹಂಗ ಹೇಳಲಿಲ್ಲ. ಅಕಿ ಹೇಳಿದ್ದು ಮನಸಿನಾಗ ಚುಚ್ಚತಿತ್ತು. ಒಂದು ವೇಳೆ ನಮ್ಮಮ್ಮ ನನ್ನಂಗೆ ಕೆಲಸ ಮಾಡದೇ ಮನ್ಯಾಗ ಇದ್ರ... ನಮ್ಮಮ್ಮ ಆಗಿನೇ ಅಕಿನ ಜೀವನ ಮುಗೀತಿತ್ತು. ನಾ ಹಂಗಾಗೂದು ಸಾಧ್ಯವೇ ಇಲ್ಲ ಅನ್ನೂದು ನನ್ನೊಳಗೇ ಬೀಜ ಮೊಳೆತಿತ್ತು. ಅಲ್ಲಿಂದಲೇ ನನ್ನೊಳಗ ನನ್ನಮ್ಮ ಬೆಳಿಯೂದು ಶುರು ಆಗಿತ್ತು.

ನನ್ನ ಮದಿವಿ ಆಯಿತು. ನಾನು ಕೆಲಸಾನೂ ಬಿಡಲಿಲ್ಲ. ಆದ್ರ ಕೆಲಸದಿಂದ ಬ್ಯಾಸತ್ತು ಬಂದಾಗ ನಮ್ಮನ್ಯಾಗೂ ಹಿಂಡಿ ಡಬ್ಬಿ ಟೇಬಲ್ ಮ್ಯಾಲೆ ಬರ್ತಿದ್ವು. ಬೆಣ್ಣಿ ತುಪ್ಪದ ಜೊತಿಗೆ ಚೀಸು, ಸಾಸು ಜಾಗಾ ಹಿಡದ್ವು. ರೊಟ್ಟಿ ಮುಟಗಿ ಮರತೇ ಹೋಯಿತು. ಮೊಸರು, ಸೌತಿಕಾಯಿ, ಹುರಿದ ಸೇಂಗಾ ನಮ್ಮಮ್ಮ ಇಡೂಹಂಗೆ ಟೇಬಲ್ ಮ್ಯಾಲೆ ಇಡ್ತಿದ್ದೆ. ರಾತ್ರಿ ಊಟದ ಚಿಂತಿ ಹಿಂಗ ಬಗೀಹರೀತಿತ್ತು. ದಿನ ಉರುಳಿದ್ವು. ನನಗೂ ಮಗಳಾದ್ಲು. ಅಕಿನೂ ಥೇಟ್ ನನ್ನಂಗೆ, ಟವಲ್ ಸುತ್ಗೊಂಡು ಅಮ್ಮನ ಆಟ ಆಡಿದ್ಲು. ನನ್ನ ಚಪ್ಪಲಿಯೊಳಗ ತನ್ನ ಪಾದ ತೂರಿಸಿ ನಡೀತಿದ್ಲು. ತಪ್ಪು ಹೆಜ್ಜಿ ಇಟ್ಗೊಂತ...

ಅಡಗಿ ಮಾಡೂಮುಂದ ಇತ್ತಿತ್ಲಾಗ ನಂಗೂ ಬೇಂದ್ರೆ ಅಜ್ಜನ ಹೆಚ್ಚು ಆಪ್ತ ಆಗತೊಡಗಿದ್ದ. ಕಿಶೋರ್ ಕುಮಾರ್ ಎಲ್ಲೋ ನನ್ನ ನಗುವಿನಹಂಗೆ ಮಾಯ ಆಗಿದ್ದ. ಅಡಗಿ ಮಾಡೂಮುಂದ ನನ್ನ ಕೈ ಹಿಡಿದಾಕೆ... ಹಾಡು ತಾನೇ ನೆನಪಾಗ್ತಿತ್ತು. ಅಮ್ಮನೂ ನೆನಪಾಗ್ತಿದ್ಲು. ಜೊತಿಗೆ ಅಪ್ಪಗ ಬೆಣ್ಣೀ ಹಚ್ಚಿ, ಹುಂಚೀಖಾರ ಸವರಿ, ಪುಠಾಣಿ ಹಿಂಡಿ ಉದುರಿಸಿ, ಮುಟಗಿ ಕಟ್ಟಿಕೊಡೂದು ನೆನಪಾಗ್ತಿತ್ತು. ನಾನು ನಾನೇ ಆಗಿ ಉಳದ್ನಾ... ಅನ್ನೂ ಪ್ರಶ್ನೆ ಮಾತ್ರ ಈ ಹಾಡುಗಳ ಜೊತಿಗೆ, ಊಟದ ಜೊತಿಗೆ ನೆನಪಾಗ್ತಿತ್ತು. ಕಡೀಕ ನಾನು ನಾನೇನಾ... ಅನ್ನೂ ಪ್ರಶ್ನೆನೇ ಬ್ಯಾಡ ಅನಸ್ತಿತ್ತು.

ಯಾಕಂದ್ರ ನನ್ನ ಮಗಳೂ ಈಗೀಗ ನನ್ನಂಗೆ ನನ್ನ ವಿರೋಧಿಸ್ತಿದ್ಲು. ನಾನು ಅಡಗಿ, ಕೆಲಸಾ ಸಂಸಾರ ಅಂತ ನಾನೇ ಸವ್ಯಾಂಗಿಲ್ಲ ನೋಡು... ಆದ್ರ ಮಾಡ್ತೀನಿ. ಇಲ್ಲಾಂದ್ರ ಕೆಲಸದೋರಿಗೆ ಹುಡಕ್ತೀನಿ. ತಂತೀ ನಡಗಿ ಅಂತ ಯಾಕಂತಿ? ನಾವು ನಡಿಯೂ ಹಾದಿ ಮ್ಯಾಲೆ ಆನಿಹಂಗ ನಡಕೊಂತ ಹೋಗೂನು... ಅನ್ನೂರು ಏನರೆ ಅನ್ನಲಿ. ನಾ ಯಾರದೂ ಕೇಳಾಂಗಿಲ್ಲ ನೋಡು..'

ನಾ ನಕ್ಕು ಸುಮ್ನಾಗ್ತಿದ್ದೆ. ಯಾಕಂದ್ರ ನಾ ನನ್ನನ್ನೇ ನನ್ನ ಮಗಳನೊಳಗ ಕಂಡಿದ್ದೆ. ನನ್ನಮ್ಮನೇ ನಾನಾಗಿದ್ದೆ.

⌘